ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ: ಸಿಬ್ಬಂದಿ ಶಾಖೆ: ಬೆಂಗಳೂರು

ಸಂ.ಕರಾಸಾ/ಕೇಕ/ಸಿಬ್ಬಂದಿ/ಸಿ3/202/1037/2020-21 ದಿನಾಂಕ: 12.02.2021

ಗೆ,

ಎಲ್ಲಾ ಇಲಾಖಾ ಮುಖ್ಯಸ್ಥರು,
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿಗಳು/
ಪ್ರಾಂಶುಪಾಲರು, ಕಾರ್ಯ ವ್ಯವಸ್ಥಾಪಕರು,
ಮುದ್ರಣಾ & ಲೇಖನ ಸಾಮಾಗ್ರಿ ನಿಯಂತ್ರಣಾಧಿಕಾರಿ,
ಕರಾರಸಾ ನಿಗಮ

ಮಾನ್ಯರೆ,

ವಿಷಯ: ಪರಿಶಿಷ್ಟ ಪಂಗಡದ ಸೌಲಭ್ಯ ವಿಸ್ತರಿಸುವ ಕುರಿತು.
ಉಲ್ಲೇಖ: 1.ಸಂಖ್ಯೆ/ಸಕಇ/13/ಎಸ್ ಎಡಿ/2009 ದಿನಾಂಕ: 06.06.2020
[illegible]

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ, ಸರ್ಕಾರದ ಅಧೀನ ಕಾರ್ಯದರ್ಶಿ-2, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಂದ ಬಂದ ಸುತ್ತೋಲೆಯ ಪ್ರತಿಯನ್ನು ತಮ್ಮ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಅಡಕಗೊಳಿಸಲಾಗಿದೆ. ಸುತ್ತೋಲೆಯಲ್ಲಿ ಭಾರತ ಸಂವಿಧಾನದ The Constitution (Scheduled Tribes) Order (Amendment) Act, 2020 ರಲ್ಲಿ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಕ್ರಮ ಸಂಖ್ಯೆ: 38 ರಲ್ಲಿ Parivara ಮತ್ತು Talawara ಜಾತಿಗಳಿಗೆ ಹಾಗೂ ಕ್ರಮ ಸಂಖ್ಯೆ: 50 ರಲ್ಲಿ ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿನ "Siddi" ಜನಾಂಗದವರಿಗೆ ಪರಿಶಿಷ್ಟ ಪಂಗಡದ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ ತಿಳಿಸಲಾಗಿರುತ್ತದೆ. ಅದರಂತೆ ಸಕ್ಷಮ ಪ್ರಾಧಿಕಾರಿಗಳ ಆದೇಶಗಳನ್ವಯ ಈ ಕೆಳಗೆ ನೀಡಲಾದ ನಿರ್ದೇಶನಗಳ ಅನುಸಾರ ಅಗತ್ಯ ಕ್ರಮಕೈಗೊಳ್ಳಲು ಕೋರಿದೆ.

1. ಉಲ್ಲೇಖ-1 ರ ಸುತ್ತೋಲೆಯನ್ನು ವಿಭಾಗ/ಕಾರ್ಯಾಗಾರ/ಘಟಕಗಳ ನೋಟೀಸು ಬೋರ್ಡಿನಲ್ಲಿ ಪ್ರಕಟಿಸಿ ಎಲ್ಲಾ ಉದ್ಯೋಗಿಗಳ ಗಮನಕ್ಕೆ ತರಲು ಕ್ರಮ ಕೈಗೊಳ್ಳುವುದು.
2. ಪ್ರಸ್ತುತ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳ ಪೈಕಿ ಪರಿವಾರ, ತಳವಾರ ಹಾಗೂ ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಸಿದ್ಧಿ ಜನಾಂಗದವರಿದ್ದಲ್ಲಿ ಅವರುಗಳಿಗೆ ಹಿಂಬರಹ ನೀಡಿ ಸುತ್ತೋಲೆಯಲ್ಲಿ ತಿಳಿಸಿರುವಂತೆ ಜಾತಿ ಪ್ರಮಾಣ ಪತ್ರಗಳನ್ನು ಪಡೆದು ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆದ ನಂತರ ಸೇವಾ ದಾಖಲೆಗಳನ್ನು ನಮೂದಿಸಿ ಕ್ರಮವಹಿಸುವುದು.

3. ಸಂಬಂಧಪಟ್ಟ ಪ್ರಾಧಿಕಾರದಿಂದ ಸಿಂಧುತ್ವ ಪ್ರಮಾಣ ಪತ್ರ ಬಂದಲ್ಲಿ ಸದರಿ ಉದ್ಯೋಗಿಗಳ ಸೇವಾಪುಸ್ತಕದಲ್ಲಿ ಪರಿಶಿಷ್ಟ ಪಂಗಡ ST ಎಂದು ನಮೂದಿಸಿ ದೃಢೀಕರಿಸಿದ ನಂತರ ಭವಿಷ್ಯತ್ತಿನಲ್ಲಿ "ಪರಿಶಿಷ್ಟ ಪಂಗಡದ" ಅಡಿಯಲ್ಲಿ ಬರುವ ನಿಯಮಾನುಸಾರ ಸೌಲಭ್ಯಗಳಿಗೆ ಪರಿಗಣಿಸಲು ಕ್ರಮಕೈಗೊಳ್ಳುವುದು.

4. ಮೇಲೆ ಸೂಚಿಸಿದಂತೆ ದಿನಾಂಕ: 06.06.2020 ರ ನಂತರ ಸಲ್ಲಿಸಲಾದ ಜಾತಿ ಪ್ರಮಾಣ ಪತ್ರ/ಸಿಂಧುತ್ವ ಪ್ರಮಾಣ ಪತ್ರಗಳನ್ನು ಮಾತ್ರ ಪರಿಗಣಿಸತಕ್ಕದ್ದು.

ಈ ವಿಷಯದಲ್ಲಿ ತಮ್ಮ ವೈಯಕ್ತಿಕ ಗಮನ ಹರಿಸಿ ಯಾವುದೇ ದೂರುಗಳಿಗೆ ಅವಕಾಶ ನೀಡದೇ ಸೂಕ್ತ ಕ್ರಮ ತೆಗೆದುಕೊಳ್ಳಲು ಸಂಬಂಧಿಸಿದವರಿಗೆ ಸೂಚನೆಗಳನ್ನು ನೀಡುವಂತೆ ಹಾಗೂ ಈ ವಿಷಯದಲ್ಲಿ ತೆಗೆದುಕೊಂಡ ಕ್ರಮದ ಕುರಿತು ವಿವರವಾದ ವರದಿಯನ್ನು 15 ದಿನಗಳ ಒಳಗಾಗಿ ಕಳುಹಿಸಿಕೊಡುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ಸಿಬ್ಬಂದಿ)

## ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:ಕೇಂದ್ರ ಕಛೇರಿ: ಕಲಬುರಗಿ

ಸಂ:ಈಕರಸಾ/ಕೇಕ/ಸಿಬ್ಬಂದಿ/ಆಡಳಿತ/ಅ4/2302/2020-21 ದಿನಾಂಕ: 23/02/2021

"ಪರಿಶಿಷ್ಟ ಪಂಗಡದ ಸೌಲಭ್ಯ ವಿಸ್ತರಿಸುವ ಕುರಿತು ಕರಾರಸಾ ನಿಗಮದಿಂದ ಹೊರಡಿಸಲಾದ ನಿರ್ದೇಶನ ಪತ್ರ ಸಂ. ಕರಾಸಾ/ಕೇಕ/ಸಿಬ್ಬಂದಿ/ಸಿ3/202/1097/2020-21 ದಿನಾಂಕ 12.02.2021 ಅನ್ನು ಯಥಾವತ್ತಾಗಿ ಈಕರಸಾ ಸಂಸ್ಥೆಯಲ್ಲಿ ಅಳವಡಿಸಿಕೊಳ್ಳಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕ ರವರು ಆದೇಶಿಸಿರುತ್ತಾರೆ." ಸಂಬಂಧಪಟ್ಟವರು ಸದರಿ ನಿರ್ದೇಶನಗಳನ್ನು ಪಾಲಿಸಲು ಕೋರಲಾಗಿದೆ.

23/2/21

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು

ಪ್ರತಿಯನ್ನು ವಂದನೆಗಳೊಂದಿಗೆ:-

- ✓ ಎಲ್ಲಾ ಇಲಾಖಾ ಮುಖ್ಯಸ್ಥರು, ಈಕರಸಾ ಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ ರವರ ಮಾಹಿತಿಗಾಗಿ.
- ✓ ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಈಕರಸಾ ಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ. ಸಂಸ್ಥೆಯ ಅಧಿಕಾರಿಗಳ ವೈಯುಕ್ತಿಕ ಕಡತಗಳನ್ನು ಪರಿಶೀಲಿಸಿ ಈ ಸೌಲಭ್ಯಕ್ಕೆ ಅರ್ಹರಾಗುವ ಅಧಿಕಾರಿಗಳ ವಿವರಗಳನ್ನು ಕೂಡಲೇ ಕರಾರಸಾ ನಿಗಮ, ಬೆಂಗಳೂರು ರವರಿಗೆ ಕಳುಹಿಸಲು ಕೋರಿದೆ.
- ✓ ಮುಖ್ಯ ಗಣಕ ವ್ಯವಸ್ಥಾಪಕರು, ಈಕರಸಾ ಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ ರವರ ಮಾಹಿತಿಗಾಗಿ ಹಾಗೂ ಸದರಿ ನಿರ್ದೇಶನ ಪತ್ರವನ್ನು ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.

ಪ್ರತಿಯನ್ನು:-

- ✓ ಎಲ್ಲಾ ಹಿರಿಯ / ವಿಭಾಗೀಯ ನಿಯಂತ್ರಣಾಧಿಕಾರಿಗಳು / ಕಾರ್ಯವ್ಯವಸ್ಥಾಪಕರು / ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಪ್ರಾಂಶುಪಾಲರು, ಈಕರಸಾ ಸಂಸ್ಥೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
- ✓ ಮಾನ್ಯ ಅಧ್ಯಕ್ಷರು, ಈಕರಸಾ ಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ ರವರ ವಿಶೇಷ ಕರ್ತವ್ಯಾಧಿಕಾರಿ ರವರ ಮಾಹಿತಿಗಾಗಿ.
- ✓ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಈಕರಸಾ ಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ ರವರ ಆಪ್ತ ಕಾರ್ಯದರ್ಶಿ ರವರ ಮಾಹಿತಿಗಾಗಿ.